






ಟಿ.ವಿ.ಯಲ್ಲಿ ನಟ್ ಕ್ರ್ಯಾಕರ್ಸ್ ಮ್ಯೂಸಿಯಂನ ಹುಟ್ಟು, ಅದರ ರೂವಾರಿಯ ಬಗ್ಗೆ ಮತ್ತು ನಟ್ ಕ್ರ್ಯಾಕರ್ಸ್ ಗೊಂಬೆಗಳ ಕಾಯಿ ಒಡೆಯುವ ತಂತ್ರದ ಕುರಿತು ಸವಿವರ ಸಾಕ್ಷ್ಯಚಿತ್ರ ಬಿತ್ತರವಾಗುತ್ತಿತ್ತು. 1995ರಲ್ಲಿ ಆರ್ಲೀನ್ ವಾಗ್ನರ್ ಮತ್ತು ಆಕೆಯ ಪತಿ ಜಾರ್ಜ್, ನಟ್ ಕ್ರ್ಯಾಕರ್ ಮ್ಯೂಸಿಯಂ ಸ್ಥಾಪನೆ ಮಾಡಿದರು. 5000 ಚದರದಡಿಯ ಈ ಎರಡು ಮಹಡಿಯ ಕಟ್ಟಡ ಲಾಭರಹಿತ ಸಂಸ್ಥೆಯಾಗಿದ್ದು ಸಾರ್ವಜನಿಕರಿಗೆ ಮುಕ್ತವಾಗಿದೆ. ಆರ್ಲೀನ್ ಚಿಕ್ಕವಳಾಗಿದ್ದಾಗಿನಿಂದಲೇ ಸೈನಿಕ ಗೊಂಬೆಗಳನ್ನು ಸಂಗ್ರಹಿಸತೊಡಗಿದಳು. 1960ರಲ್ಲಿ ವಿವಿಧ ರೀತಿಯ ನಟ್ ಕ್ರ್ಯಾಕರ್ಸ್‌ಗಳನ್ನು ಕೊಂಡುಕೊಳ್ಳತೊಡಗಿದಳು. ಆರ್ಲೀನ್ ವಾಗ್ನರನ್ನು 'ನಟ್ ಕ್ರ್ಯಾಕರ್ ಲೇಡಿ' ಎಂದೇ ಕರೆಯಲಾಗುತ್ತದೆ. ಆರ್ಲೀನ್ ಮತ್ತು ಜಾರ್ಜ್ ವ್ಯಾಗ್ನರ್ ನಟ್ ಕ್ರ್ಯಾಕರ್‌ಗಳನ್ನು ಹುಡುಕಿಕೊಂಡು ಭೂಗೋಳವನ್ನೇ ಸುತ್ತು ಹಾಕಿದ್ದಾರೆ. ಅಷ್ಟೇ ಅಲ್ಲದೆ, ಅನೇಕ ದೇಶಗಳು ತಮ್ಮ ಪ್ರದೇಶದ ಅಡಿಕೆ ಕತ್ತರಿಗಳನ್ನು ಈ ಸಂಗ್ರಹಾಲಯಕ್ಕೆ ಕೊಡುಗೆಯಾಗಿಯೂ ನೀಡಿವೆ. ಜರ್ಮನಿಯಲ್ಲಿ ಮಾಡಲಾಗಿರುವ ಕಾರ್ಲ್ ಎಂಬ 6 ಅಡಿ ಎತ್ತರದ ನಟ್ ಕ್ರ್ಯಾಕರ್ ಅನ್ನು ಈ ಮ್ಯೂಸಿಯಂನ ಪ್ರವೇಶ ದ್ವಾರದಲ್ಲಿ ನಿಲ್ಲಿಸಲಾಗಿದೆ. ಈ ಹೆಸರಾಂತ ಮ್ಯೂಸಿಯಂನಲ್ಲಿ ಭಾರತದ ಅಡಿಕೆ ಕತ್ತರಿಗಳನ್ನು ನೋಡಿದಾಗ ನನಗಂತೂ ರೋಮಾಂಚನವಾಯಿತು.

ವೈವಿಧ್ಯವಾದ, ಆಸಕ್ತಿದಾಯಕ, ಭಯಾನಕ ಮತ್ತು ವಿನೋದವೆನಿಸುವ ಅಡಿಕೆ ಕತ್ತರಿ ಗೊಂಬೆಗಳು ಒಂದಕ್ಕಿಂತ ಒಂದು ಸೋಜಿಗವೆನಿಸುತ್ತವೆ. ಐತಿಹಾಸಿಕ, ಫೇರಿಟೇಲ್ಸ್, ಸ್ಟಾರ್ ವಾರ್ಸ್‌ನ ಪಾತ್ರಗಳು, ಸೈನಿಕರು, ಡಿಸ್ನಿಯ ಮಿಕ್ಕಿ ಮೌಸ್, ಹ್ಯಾರಿ ಪಾಟರ್, ಎಲ್ವಿಸ್ ಪ್ರಿಸ್ಲೇ ಮೊದಲಾದ ಹೆಸರಾಂತ ಕಲಾವಿದರೊಂದಿಗೆ ಪಶು–ಪಕ್ಷಿಗಳ ಮರದ ಪ್ರತಿಕೃತಿಗಳನ್ನೂ ಕಾಣಬಹುದು. ಒಂದರ ಕಿವಿ ತಿರುಗಿಸಿದರೆ ಬಾಯಿ ಬಿಡುತ್ತದೆ, ಬಾಲ ಎತ್ತಿದರೆ ಹೊಟ್ಟೆ ತೆರೆದುಕೊಳ್ಳುತ್ತದೆ, ಸೈನಿಕನ ಟೋಪಿ ಎತ್ತಿದರೆ ಕಾಲು ಎತ್ತುತ್ತದೆ, ಕೈ ಎಳೆದರೆ ಕಿವಿ ತೆರೆಯುತ್ತದೆ. ಆಗ ತೆರೆದ ಭಾಗಗಳಲ್ಲಿ ಅಡಿಕೆ, ಪೆಕನ್ ಅಥವಾ ತೆಂಗಿನಕಾಯಿ ಇಟ್ಟು ಮುರಿಯಬಹುದು. ಹೀಗೆ ಪ್ರತಿಯೊಂದೂ ತಮ್ಮದೇ ಆದ ವೈವಿಧ್ಯದಿಂದ ವಿಸ್ಮಯ ಮೂಡಿಸುತ್ತವೆ. ನಟ್ ಕ್ರ್ಯಾಕರಿನ ಕಲೆ ಮತ್ತು ತಾಂತ್ರಿಕತೆಯ ಬಗ್ಗೆ ಅಧ್ಯಯನ ಮಾಡಲು ಈ ಮ್ಯೂಸಿಯಂ ಅತ್ಯುತ್ತಮ ಸ್ಥಳ ಎಂದು ಹೇಳಲಾಗಿದ್ದು, ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದೆ.

ಜರ್ಮನಿ ಮತ್ತು ಲೀವೆನ್‌ವರ್ತ್‌ನಲ್ಲಿ ಮಾತ್ರ ನಟ್ ಕ್ರ್ಯಾಕರ್ ಮ್ಯೂಸಿಯಂ ಇರುವುದು. ಇಡೀ ಪ್ರಪಂಚದಲ್ಲಿ ಲೀವೆನ್‌ವರ್ತ್ ನಟ್ ಕ್ರ್ಯಾಕರ್ ಮ್ಯೂಸಿಯಂನಲ್ಲಿ ಮಾತ್ರ ಸುಮಾರು 50 ದೇಶಗಳಿಂದ ಸಂಗ್ರಹಿಸಲಾದ 9000 ನಟ್ ಕ್ರ್ಯಾಕರ್‌ಗಳನ್ನು ಒಂದೇ ಸೂರಿನಡಿ ಕಾಣಬಹುದು. ನಮ್ಮ ಭಾರತದಲ್ಲೇ ಕಂಡುಬಂದಿರದ ಬಹುದೊಡ್ಡ ಅಡಿಕೆ ಕತ್ತರಿ ಇಲ್ಲಿದೆ. 12 ಹಾಗೂ 13ನೇ ಶತಮಾನದಿಂದ ಈ ಆಧುನಿಕ ಯುಗದವರೆಗೂ ಸಂಗ್ರಹಿಸಲಾದ ಬಗೆಬಗೆಯ ನಟ್ ಕ್ರ್ಯಾಕರ್ಸ್‌ಗಳು ಚಿಕ್ಕ ಮಕ್ಕಳಿಂದ ದೊಡ್ಡವರೂ ಕಣ್ಣರಳಿಸುವಂತೆ ಮಾಡುತ್ತವೆ.

ಪ್ರತಿಕ್ರಿಯಿಸಿ: feedback@sudha.co.in